ಹೇಳಲು ಸರ್ಕಾರ ಸಿದ್ಧವಿದೆ. ಇಂದು ಸದಸ್ಯರು ಹೇಳಿದಂತಹ ಆತಂಕ ಕಡಿಮೆಯಾಗಿದೆ, ಡೀಸೆಲ್ ಸಾಕಷ್ಟು ಪ್ರಮಾಣದಲ್ಲಿ ಇದೆ, ಯಾವ ರೀತಿಯ ಆತಂಕ ಇಲ್ಲ, ಭಯವಿಲ್ಲ, ಭೀತಿಯಿಲ್ಲ ವಿತರಣೆಯಲ್ಲಿ ಏನಾದರೂ ಲೋಪದೋಷವಿದ್ದರೆ ಸರಿಪಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸಾರ್ವಜನಿಕರಿಗೆ ಡೀಸೆಲ್ ಸಿಗುತ್ತಿಲ್ಲ ಮಂತ್ರಿಗಳಿಗೆ ಸಿಗುತ್ತಿದೆ.

## ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರ

**ಚಿತ್ತಾಪುರ ತಾಲ್ಲೂಕಿಗೆ ಕುಡಿಯುವ ನೀರಿನ ಸರಬರಾಜು**

560 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಮತಕ್ಷೇತ್ರದಲ್ಲಿ ಬರುವ ಚಿತ್ತಾಪುರ ತಾಲ್ಲೂಕಿನ ಸಂಕನೂರ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಇಂದಿಗೂ ಬವಣೆ ಪಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

*ಆ) ಗುಲ್ಬರ್ಗಾ ಜಿಲ್ಲಾ ಪರಿಷತ್ ಈಗಾಗಲೇ ಮುಖ್ಯ ಅಭಿಯಂತರರು ಪಿ.ಹೆಚ್.ಇ. ಬೆಂಗಳೂರು ಇವರು ಎರಡು ಮೂರು ಸಲ ಕ್ರಮ ಕೈಗೊಳ್ಳಲು ತಿಳಿಸಿದರೂ ಸಹ ಈ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡದಿರಲು ಕಾರಣಗಳೇನು*

*ಇ) ಈ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ತಪ್ಪಿಸಲು ಸರ್ಕಾರ ಯೋಜನೆಯನ್ನೇನಾದರೂ ಕೈಗೊಂಡಿದೆಯೇ?*

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) 1990-91ನೇ ಸಾಲಿನ ಆಯವ್ಯಯದ ರಾಜ್ಯವಲಯದಲ್ಲಿರುವ ಅನುದಾನದಲ್ಲಿ ಈ ಯೋಜನೆಯನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ.

ಇ) ಈ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ತಪ್ಪಿಸಲು ಸದರಿ ಗ್ರಾಮದ ಪುನರುಜ್ಜೀವನ ಯೋಜನೆಯನ್ನು 1991-92ರ ಸಾಲಿನಲ್ಲಿ ಕೈಗೊಂಡ ನೀರಿನ ಬವಣೆಯನ್ನು ಪರಿಹರಿಸಲು ಯೋಜಿಸಲಾಗಿದೆ.

**ಮಾಗಡಿ ತಾಲ್ಲೂಕಿನಲ್ಲಿರುವ ಮಾರುಕಟ್ಟೆ ವ್ಯವಸಾಯೋತ್ಪನ್ನ ಸಹಕಾರ ಸಂಘ**

158 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ): ಮಾನ್ಯ ಸಹಾಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮಾಗಡಿ ತಾಲ್ಲೂಕಿನಲ್ಲಿರುವ ಮಾರುಕಟ್ಟೆ ವ್ಯವಸಾಯೋತ್ಪನ್ನ ಸಹಕಾರ ಸಂಘವು ಕಳೆದ ಮೂರು ವರ್ಷಗಳಿಂದ ಮುಚ್ಚಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

*ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು)

ಅ) ಇಲ್ಲ, ಈ ಸಹಕಾರ ಸಂಘವು ಕಳೆದ ಮೂರು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದೆ.

ಆ) ಮೇಲಿನ ಪ್ರಶ್ನೆಗೆ ನೀಡಿದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.